# ಕವಿತೆಗಳು

ತುಂಟ ಗಾಳಿಗೆ ನನ್ನ
ಕೆನ್ನೆಯ ಮೇಲೆ ಹಾರಾಡುವ
ಮುಂಗುರುಳ,
ನೀನು,
ಬಾರಿಬಾರಿಗೂ ಸರಿಸುವೆ
ಮತ್ತೆ ಹೇಳುವಿ,
'ಎಂಥ ಗಾಳಿ!'
ನಾನು ನೋಡುತಿರುವಂತೆ
ನಿನ್ನ,
ತುಟಿಯಂಚಿನಲಿ,
ಮೂಡುವುದೊಂದು ಕಿರುನಗೆ

★★★

ನೀನು ಹೋದ ಮೇಲೆ
ಮನೆಯ ತುಂಬ ಹರಡಿದ
ನಮ್ಮ
ನಗೆ, ಮಾತು, ಕನಸು,
ನಿನ್ನ ಅನಿರೀಕ್ಷಿತ ಮುತ್ತುಗಳು
ತುಂಟಕಂಗಳು, ಕವಿತೆ,
ಗುಲಾಬಿಯ ಪರಿಮಳ
ಎಲ್ಲದರಿಂದ ಶೃಂಗರಿಸುವೆ,
ಮೌನವಾಗಿದ್ದ ಮನೆಯ
ನಿಜಕ್ಕೂ ಖುಷಿಯೋ
ದುಃಖವೋ
ತಿಳಿಯದೇ ಹೋದೆ

★★★

ಮಳೆಯ ಅಬ್ಬರದಲಿ ನಮ್ಮ





ಮಾತು ಕೊಚ್ಚಿ ಹೋದವು
ಅಲ್ಲಿ, ನಿನ್ನೂರಿನಲಿ
ಸುರಿಯುತಿದ್ದ ವರ್ಷಾಧಾರೆ
ನನ್ನ ಕಂಗಳಲಿ ಇಳಿಯಿತು
ಇಂದು,
ನನಗೆ ಗೊತ್ತು,
ಬಿಡದೆ ಮಳೆ ಸುರಿಯಲಿದೆ
ಹೀಗೆಯೇ, ಯಾರೋ,
ಮೋಡಗಳ ಹೃದಯವನು
ಒಡೆದಿರಬೇಕು ಅಲ್ಲವೆ?
ಅಂತೆ,
ಮಳೆ ಸುರಿಯುತಿದೆ
ಒಳಗೆ ಮತ್ತೆ ಹೊರಗೂ

★★★

ಹೂಗಳ ಕಣಿವೆಯಲಿ
ಶರಧಿಯ ತೆರೆಗಳಲಿ
ನಕ್ಷತ್ರ ಖಚಿತ ಆಗಸದ
ಅಂಚಿನಲಿ ಆಡುವಾಗ
ನಾನು ಕೇಳಿದೆ;
'ಎಷ್ಟು ಚೆಂದವಲ್ಲವೆ?'
ನೀನು,
ನನ್ನನ್ನೇ ದಿಟ್ಟಿಸುತ
ಪಿಸುಗುಟ್ಟಿದೆ
'ಹೌದು ತುಂಬ ಚೆಂದ'

● **ಎಚ್.ಎಸ್. ಮುಕ್ತಾಯಕ್ಕ**

ಕಲೆ: ವಾಗೀಶ ಹೆಗಡೆ